1	2	3
12.	ದಾವಣಗೆರೆ	21439
13.	ಧಾರವಾಡ	8562
14.	ಗದಗ್	14179
15.	ಗುಲ್ಬರ್ಗಾ	44169
16.	ಹಾಸನ	8157
17.	ಹಾವೇರಿ	9271
18.	ಕೊಡಗು	2133
19.	ಕೋಲಾರ	21482
20.	ಕೊಪ್ಪಳ	18453
21.	ಮಂಡ್ಯ	15199
22.	ಮೈಸೂರು	18023
23.	ರಾಯಚೂರು	19253
24.	ಶಿವಮೊಗ್ಗ	17232
25.	ತುಮಕೂರು	–
26.	ಉತ್ತರ ಕನ್ನಡ	7895
27.	ಉಡುಪಿ	4609
	ಒಟ್ಟು	387155

ಅ) ಇಲ್ಲ

ಕೇಂದ್ರ ಸರ್ಕಾರ ಅಂತ್ಯೋದಯ ಅನ್ನ ಯೋಜನೆಯಡಿಯಲ್ಲಿ ರಾಜ್ಯದಲ್ಲಿನ ಫಲಾನುಭವಿಗಳ ಸಂಖ್ಯೆಯನ್ನು 4,79,700 ಎಂದು ನಿಗದಿಪಡಿಸಿರುವುದರಿಂದ, ಜಿಲ್ಲೆಗಳಲ್ಲಿ ಫಲಾನುಭವಿಗಳ ಸಂಖ್ಯೆ ಹೆಚ್ಚಿಗೆ ಮಾಡಲು ಅವಕಾಶವಿರುವುದಿಲ್ಲ.

ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಅಪರಾಧಗಳು

2445 (3249) **ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :—** ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಬೆಂಗಳೂರು ನಗರದಲ್ಲಿ ಕಳೆದ ಎರಡು ವರ್ಷಗಳಲ್ಲಿ ಆಗಿರುವ ಕೊಲೆ, ಸುಲಿಗೆಗಳು, ಸರಗಳ್ಳತನಗಳು, ದರೋಡೆಗಳ ಸಂಖ್ಯೆ ಎಷ್ಟು; ಹಾಗೂ ಎರಡು ವರ್ಷಗಳಲ್ಲಿ ವಿಡಿಯೋ ಗೇಮ್ಸ್‌ಗಳು, ಎರಡು ಅಂಕಿ ಲಾಟರಿಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2) ಇವುಗಳನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ಕೊಡುವುದು)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :—

1) ಬೆಂಗಳೂರು ನಗರದಲ್ಲಿ ಕಳೆದ ಎರಡು ವರ್ಷಗಳಲ್ಲಿ ಸಂಭವಿಸಿರುವ ಅಪರಾಧಗಳ ವಿವರ ಈ ಕೆಳಕಂಡಂತಿದೆ :-

ಕ್ರಮ ಸಂಖ್ಯೆ	ಅಪರಾಧ ಶೀರ್ಷಿಕೆ	1999	2000	2001 (30-6-01)
1)	ಕೊಲೆ	202	214	105
2)	ಸುಲಿಗೆ	304	257	86
3)	ಸರಗಳ್ಳತನ	142	123	46
4)	ದರೋಡೆ	64	45	27
5)	ವಿಡಿಯೋ ಗೇಮ್ಸ್	-	1	14
6)	ಎರಡಂಕಿ ಲಾಟರಿ	-	1	-

ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಯಾವುದೇ ವಿಡಿಯೋ ಗೇಮ್ಸ್‌ಗಳಿಗೆ ಯಾವುದೇ ಪರವಾನಿಗೆ ನೀಡಿರುವುದಿಲ್ಲ, ಅದಾಗ್ಯೂ ಸಹ ಕೆಲವೊಂದು ವಿಡಿಯೋ ಗೇಮ್ಸ್ ಪಾರ್ಲರ್‌ನ ಮಾಲೀಕರು ಮಾನ್ಯ ನ್ಯಾಯಾಲಯದಿಂದ ತಡೆಯಾಜ್ಞೆ ತಂದು ನ್ಯಾಯಾಲಯದ ಆದೇಶದ ಮೇರೆಗೆ ನಡೆಸುತ್ತಿರುತ್ತಾರೆ, ಅಂತಹ ವಿಡಿಯೋ ಪಾರ್ಲರ್‌ಗಳಲ್ಲಿ ಯಾವುದಾದರೂ ಅನೈತಿಕ ಚಟುವಟಿಕೆಗಳು ಕಂಡುಬಂದಲ್ಲಿ ಅವರ ಮೇಲೆ ನಿಯಮಾನುಸಾರ ಕಾನೂನು ಕ್ರಮ ಜರುಗಿಸಲಾಗುತ್ತದೆ. ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಸಾಂಪ್ರದಾಯಿಕ ಲಾಟರಿ ಕಾನೂನಿನಲ್ಲಿರುವ ಕೆಲವೊಂದು ನ್ಯೂನತೆಗಳನ್ನು ಲಾಟರಿ ಮಾರಾಟಗಾರರು ತಮ್ಮ ಅವಕಾಶಕ್ಕೆ ತಕ್ಕಂತೆ ಬಳಸಿಕೊಂಡು ಲಾಟರಿ ನಡೆಸುತ್ತಿರುವುದು ಕಂಡು ಬಂದಿದೆ. ಈ ಸಂಬಂಧ ಎಲ್ಲಾ ಠಾಣಾಧಿಕಾರಿಗಳಿಗೆ ಸೂಕ್ಷ್ಮವಾಗಿ ನಿಗಾವಹಿಸಲು ಸೂಚನೆ ನೀಡಿದ್ದು, ಎರಡಂಕಿ ಲಾಟರಿ ನಡೆಸುವುದು ಕಂಡು ಬಂದಲ್ಲಿ ಕಾನೂನು ಕ್ರಮ ಜರುಗಿಸಲು ಸೂಚಿಸಲಾಗಿದೆ.

2) ಬೆಂಗಳೂರು ನಗರದ ಪೊಲೀಸ್ ಅಧಿಕಾರಿಗಳು : ಸಿಬ್ಬಂದಿಯವರು ಇಂತಹ ಅಪರಾಧಗಳು ನಡೆಯದಂತೆ ತಡೆಗಟ್ಟಲು ಈ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರುತ್ತಾರೆ.

1) ಅಧಿಕಾರಿ ಮತ್ತು ಸಿಬ್ಬಂದಿಯವರು ತಮ್ಮ ವ್ಯಾಪ್ತಿಯಲ್ಲಿ ಹಗಲು ರಾತ್ರಿ ಗಸ್ತಿನ ವ್ಯವಸ್ಥೆಯನ್ನು ಚುರುಕುಗೊಳಿಸಲಾಗಿದೆ.

2) ಬೆಂಗಳೂರು ನಗರದ ನಾಗರೀಕರನ್ನು ನೆರೆ ಹೊರೆಯ ಕಾವಲು ಸಮಿತಿಯ ಸದಸ್ಯರುಗಳನ್ನಾಗಿ ನೇಮಿಸಿಕೊಳ್ಳಲು ಯೋಜನೆ ಕೈಗೊಳ್ಳಲಾಗಿದೆ.

3) ಬೆಂಗಳೂರು ನಗರದಲ್ಲಿ ವರದಿಯಾದ ಅಪರಾಧಗಳನ್ನು ಪತ್ತೆ ಹಚ್ಚಲು ವಿಶೇಷ ತನಿಖಾ ಘಟಕಗಳನ್ನು ರಚಿಸಲಾಗಿದೆ.

4) ಅಪರಾಧಗಳನ್ನು ತಡೆಗಟ್ಟಲು ಹಾಗೂ ಪೊಲೀಸ್ ಸಿಬ್ಬಂದಿ : ಅಧಿಕಾರಿಗಳೊಡನೆ ಸಹಕರಿಸಲು ಮುಂಜಾಗ್ರತಾ ಕ್ರಮವಾಗಿ ಎಸ್.ಪಿ.ಓ. (ವಿಶೇಷ ಪೊಲೀಸ್ ಅಧಿಕಾರಿ)ಗಳನ್ನು ನೇಮಿಸಲಾಗಿದೆ.

5) ಹಗಲು-ರಾತ್ರಿ ಹೊಯ್ಸಳ ಗಸ್ತಿನ ವ್ಯವಸ್ಥೆ ಮಾಡಿ ಅಪರಾಧ ತಡೆಗಟ್ಟಲು ಕ್ರಮ ಕೈಗೊಳ್ಳಲಾಗಿದೆ.

ಕೆ.ಎಸ್.ಎಫ್.ಸಿ ಸಂಸ್ಥೆಯು ಮನ್ನಾ ಮಾಡಿರುವ ಅಸಲು ಮತ್ತು ಬಡ್ಡಿ

2446(2800) ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) :— ಮಾನ್ಯ ರಾಜ್ಯ ಹಣಕಾಸು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಕಳೆದ 3 ವರ್ಷಗಳಲ್ಲಿ ಮಂಜೂರು ಮಾಡಿರುವ ಸಾಲದ ಮೊತ್ತ ಹಾಗೂ ವಸೂಲಿ ಮಾಡಿರುವ ಬಡ್ಡಿ ಮತ್ತು ಅಸಲಿನ ವಿವರಗಳನ್ನು ಒದಗಿಸುವುದು.

ಆ) ಸದರಿ ಸಂಸ್ಥೆಯು ರೋಗಗ್ರಸ್ತ ಉದ್ಯಮಗಳು ಹಾಗೂ ನಷ್ಟದಲ್ಲಿರುವ ಉದ್ಯಮಗಳ ಹೆಸರಿನಲ್ಲಿ ಅಸಲು ಹಾಗೂ ಬಡ್ಡಿಯನ್ನು ಮನ್ನಾ ಮಾಡಿರುವ ಪ್ರಸಂಗಗಳೇನಾದರೂ ಇದೆಯೇ; ಹಾಗಿದ್ದಲ್ಲಿ ಈ ರೀತಿಯ ಅಸಲು ಹಾಗೂ ಬಡ್ಡಿಯನ್ನು ಮನ್ನಾ ಮಾಡಲು ಇರುವ ಅಳತೆಗೋಲುಗಳೇನು (ವಿವರಗಳನ್ನು ಒದಗಿಸುವುದು)

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :—

ಅ) ಕಳೆದ 3 ವರ್ಷಗಳಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು 9038 ಪ್ರಕರಣಗಳಲ್ಲಿ ಸುಮಾರು 1152 ಕೋಟಿ ರೂ.ಗಳನ್ನು ವಿವಿಧ ಚಟುವಟಿಕೆಗಳಿಗೆ ಸಾಲ